ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ,
3ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು-560 009

SECRETARY
Karnataka Border Area Development Authority
Federation House, FKCCI Building,
3rd Floor, K.G. Road, Bengaluru - 560 009

ಹೆಸರಾಯಿತು ಕರ್ನಾಟಕ Telephone & Fax: 080-22352044 ಉಸಿರಾಗಲಿ ಕನ್ನಡ
E-mail: secretarygadi@karnataka.gov.in, kbada6666@gmail.com, Website: https://kbada.karnataka.gov.in

## ಕರ್ನಾಟಕ ಸರ್ಕಾರ

# ಪತ್ರಿಕಾ ಪ್ರಕಟಣೆ

**ಸಂಖ್ಯೆ:ಕಗಪ್ರ ಅಪ್ರಾ/47/ಆ/2023-24** ದಿನಾಂಕ:01.03.2024

**ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ**

ಇವರಿಗೆ,
ಮಾನ್ಯ ಸಂಪಾದಕರು,
ಟಿ.ವಿ ಸುದ್ದಿವಾಹಿನಿ ಹಾಗೂ ದಿನ ಪತ್ರಿಕೆ
--------------------
ಬೆಂಗಳೂರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಪ್ರತಿ ವರ್ಷ ನಾಡು, ನುಡಿ, ಸಾಹಿತ್ಯ ಹಾಗೂ ಕನ್ನಡ ಭಾಷೆಗಾಗಿ ರಾಜ್ಯದ ಹಾಗೂ ಹೊರ ರಾಜ್ಯದ ಗಡಿ ಕನ್ನಡ ಪ್ರದೇಶಗಳಲ್ಲಿನ ಸಂಘ ಸಂಸ್ಥೆಗಳು/ಮಹನೀಯರುಗಳಿಗಾಗಿ ಮೂರು "ಗಡಿನಾಡ ಚೇತನ ರಾಜ್ಯ ಪ್ರಶಸ್ತಿ"ಗಳನ್ನು ನೀಡುತ್ತಾ ಬರಲಾಗಿದೆ. ಈ ಪ್ರಶಸ್ತಿಗಳನ್ನು ಆಯ್ಕೆ ಮಾಡಲು 2023-24ನೇ ಸಾಲಿನಲ್ಲಿ ಸರ್ಕಾರವು ರಚಿಸಿದ್ದ ಆಯ್ಕೆ ಸಮಿತಿಯಲ್ಲಿ ಹಿರಿಯ ಸಾಹಿತಿಗಳಾದ ಡಾ||ಬರಗೂರು ರಾಮಚಂದ್ರಪ್ಪರವರ ಅಧ್ಯಕ್ಷತೆಯಲ್ಲಿ ಡಾ||ಸರಜೂ ಕಾಟಕರ, ಹಿರಿಯ ಸಾಹಿತಿಗಳು, ಬೆಳಗಾವಿ, ಡಾ||ಎಂ.ಎಸ್.ದುರ್ಗಾ ಪ್ರವೀಣ್, ಕನ್ನಡ ಪ್ರಾಧ್ಯಾಪಕರು, ಆಂಧ್ರಪ್ರದೇಶ ಹಾಗೂ ಡಾ||ಆರ್.ನಾಗಪ್ಪಗೌಡ, ಕನ್ನಡ ಪ್ರಾಧ್ಯಾಪಕರು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ರಕಾಶ್ ಮತ್ತೀಹಳ್ಳಿ, ಕಾರ್ಯದರ್ಶಿ, ಗಡಿ ಅಭಿವೃದ್ಧಿ ಪ್ರಾಧಿಕಾರ, ಇವರುಗಳನ್ನೊಳಗೊಂಡ ಆಯ್ಕೆ ಸಮಿತಿಯು ದಿನಾಂಕ:01.03.2024ರಂದು ಸಭೆ ಸೇರಿ ಪ್ರಸ್ತುತ ಸಾಲಿನಲ್ಲಿ "ಗಡಿನಾಡ ಚೇತನ" ರಾಜ್ಯ ಪ್ರಶಸ್ತಿ ಪ್ರದಾನ ಮಾಡಲು ಈ ಕೆಳಕಂಡ ಮಹನೀಯರುಗಳ ಹೆಸರಿನಲ್ಲಿ ಸ್ಥಾಪನೆ ಮಾಡಿದ "ಗಡಿನಾಡ ಚೇತನ" ರಾಜ್ಯ ಪ್ರಶಸ್ತಿಗೆ ಮೂರುಸಾಧಕರುಗಳ ಹೆಸರುಗಳನ್ನು ಆಯ್ಕೆ ಮಾಡಿರುತ್ತಾರೆ.

| ಕ್ರ. ಸಂ. | ಗಡಿನಾಡ ಚೇತನ ರಾಜ್ಯ ಪ್ರಶಸ್ತಿಯ ಹೆಸರು | "ಗಡಿನಾಡ ಚೇತನ ರಾಜ್ಯ" ಪ್ರಶಸ್ತಿಗೆ ಆಯ್ಕೆಯಾದವರು |
|---|---|---|
| 1 | ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಹಿರೇಮಠ, ಭಾಲ್ಕಿ ಇವರ ಹೆಸರಿನಲ್ಲಿ ಸ್ಥಾಪಿಸಿದ ಗಡಿ ನಾಡ ಚೇತನ ರಾಜ್ಯ ಪ್ರಶಸ್ತಿ | ಶ್ರೀ ರಾಧಾಕೃಷ್ಣ ಉಳಿಯತ್ತಡ್ಕರವರು ಹಿರಿಯ ಸಾಹಿತಿಗಳು, ಕಾಸರಗೋಡು, ಕೇರಳ ರಾಜ್ಯ, |
| 2 | ಕನ್ನಡದ ಏಕೀಕರಣದ ಹೋರಾಟದ ವೀರಾಗ್ರಣಿ "ಡಾ.ಜಯದೇವಿತಾಯಿ ಲಿಗಾಡೆ" ಇವರ ಹೆಸರಿನಲ್ಲಿ ಸ್ಥಾಪಿಸಿದ ಗಡಿ ನಾಡ ಚೇತನ ಪ್ರಶಸ್ತಿ | ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಬೀದರ್, ಹಿರಿಯ ಕನ್ನಡ ಹೋರಾಟಗಾರರು |
| 3 | ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ, ಇವರ ಹೆಸರಿನಲ್ಲಿ ಸ್ಥಾಪಿಸಿದ ಗಡಿ ನಾಡ ಚೇತನ ರಾಜ್ಯ ಪ್ರಶಸ್ತಿ | ಪ್ರೊ.ಬಿ.ಎಸ್.ಗವಿಮಠ, ಕನ್ನಡ ಚಿಂತಕರು, ಬೆಳಗಾವಿ |

**ಮೇಲ್ಕಂಡಂತೆ ಪ್ರಶಸ್ತಿಗಳನ್ನು ನೀಡಲು ಆಯ್ಕೆ ಸಮಿತಿಯು ಒಮ್ಮತದಿಂದ ತೀರ್ಮಾನಿಸಿರುತ್ತದೆ. ಅಲ್ಲದೆ ಪ್ರಶಸ್ತಿ ಮೊತ್ತವನ್ನು ರೂ.1.00ಲಕ್ಷದ ಬದಲಾಗಿ ರೂ.3.00ಲಕ್ಷ ನೀಡಲು ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲಹೆಯನ್ನು ನೀಡಿರುತ್ತದೆ.**

ಈ ಪತ್ರದೊಂದಿಗೆ ಪ್ರಶಸ್ತಿ ಪುರಸ್ಕೃತರ ಛಾಯಾಚಿತ್ರಗಳನ್ನು ಲಗತ್ತಿಸಿ ಕಳುಹಿಸಲಾಗಿದೆ.

ಈ ವಿಷಯವನ್ನು ಎಲ್ಲಾ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

ಪ್ರಕಾಶ ಮತ್ತೀಹಳ್ಳಿ
ಕಾರ್ಯದರ್ಶಿ

**ಪ್ರತಿಯನ್ನು:-**

1. ನಿರ್ದೇಶಕರು, ವಾರ್ತಾ ಇಲಾಖೆ, ಬೆಂಗಳೂರು –ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಎಲ್ಲಾ ಪತ್ರಿಕಾ/ದೃಶ್ಯ ಮಾಧ್ಯಮ ವರದಿಗಾರರಿಗೆ -ಇವರಿಗೆ ಸೂಕ್ತ ಕ್ರಮಕ್ಕಾಗಿ.



1. **ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರು ಹಿರೇಮಠ, ಭಾಲ್ಕಿ** ಇವರ ಹೆಸರಿನಲ್ಲಿ ಸ್ಥಾಪಿಸಿದ **ಗಡಿ ನಾಡ ಚೇತನ** ರಾಜ್ಯ ಪ್ರಶಸ್ತಿಗೆ ಆಯ್ಕೆಯಾದ
**ಶ್ರೀ ರಾಧಾಕೃಷ್ಣ ಉಳಿಯತ್ತಡ್ಕ,**
ಹಿರಿಯ ಸಾಹಿತಿಗಳು, ಕಾಸರಗೋಡು, ಕೇರಳ ರಾಜ್ಯ



2. **ಡಾ.ಜಯದೇವಿತಾಯಿ ಲಿಗಾಡೆ** ಇವರ ಹೆಸರಿನಲ್ಲಿ ಸ್ಥಾಪಿಸಿದ **ಗಡಿ ನಾಡ ಚೇತನ ಪ್ರಶಸ್ತಿ** ರಾಜ್ಯ ಪ್ರಶಸ್ತಿಗೆ ಆಯ್ಕೆಯಾದ
**ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ,**
ಬೀದರ್, ಹಿರಿಯ ಕನ್ನಡ ಏಕೀಕರಣ ಹೋರಾಟಗಾರರು,



3. **ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ,** ಇವರ ಹೆಸರಿನಲ್ಲಿ ಸ್ಥಾಪಿಸಿದ **ಗಡಿ ನಾಡ ಚೇತನ** ರಾಜ್ಯ ಪ್ರಶಸ್ತಿಗೆ ಆಯ್ಕೆಯಾದ
**ಪ್ರೊ.ಬಿ.ಎಸ್.ಗವಿಮಠ,**
ಬೆಳಗಾವಿ,